# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **773** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ಸಚಿವರು** | **ಉನ್ನತ ಶಿಕ್ಷಣ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | **16.12.2024 (ವರ್ಗಾವಣೆಗೊಂಡ ಪ್ರಶ್ನೆ)** |

| | **ಪ್ರಶ್ನೆ** | **ಉತ್ತರ** |
|---|---|---|
| (ಅ) | ಸಂಸ್ಕೃತ ಭಾಷೆಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು: ಸಂಸ್ಕೃತ ಭಾಷೆಯನ್ನು ಕಲಿಯುವವರಿಗೆ ಸರ್ಕಾರ ಯಾವ ರೀತಿಯ ಪ್ರೋತ್ಸಾಹ ನೀಡುತ್ತಿದೆ; (ವಿವರ ನೀಡುವುದು) | ಬಹುಪ್ರಾಚೀನವಾದ ಮತ್ತು ಉಜ್ವಲವಾದ ವೈಜ್ಞಾನಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂಪ್ರದಾಯ ಮತ್ತು ಪರಂಪರೆಗಳುಳ್ಳ ಹಾಗೂ ಗದ್ಯ, ಪದ್ಯ, ನಾಟಕ, ನಾಟ್ಯ, ಶಿಲ್ಪಕಲೆ, ವರ್ಣಚಿತ್ರ, ಲಲಿತ ಕಲೆಗಳು, ವೈದ್ಯ ಶಾಸ್ತ್ರ, ತತ್ವಜ್ಞಾನ ಕ್ಷೇತ್ರಗಳನ್ನು ಮತ್ತು ಇತರೆ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಭಾರತೀಯ ವಿದ್ವಾಂಸರು ಈವರೆವಿಗೂ ಸಾಧಿಸಿರುವ ಸಾಧನೆಗಿಂತಲೂ ವ್ಯಾಪಕವಾದ ಮತ್ತು ಚಿರಂತನವಾದ ಕೊಡುಗೆಯನ್ನು ನೀಡಿರುವಂತಹ ಸಂಸ್ಕೃತ ಭಾಷೆಯ ಅನನ್ಯ ಅಭಿವೃದ್ಧಿಗಾಗಿಯೆಂದೇ ಪ್ರತ್ಯೇಕವಾದ ಒಂದು ವಿಶ್ವವಿದ್ಯಾಲಯವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ರ ಕಾಯ್ದೆಯನ್ವಯ ಸ್ಥಾಪಿಸಲಾಗಿದೆ.<br><br>ಸರ್ಕಾರಿ / ಖಾಸಗಿ ಅನುದಾನಿತ ಸಂಸ್ಕೃತ ಕಾಲೇಜುಗಳು, ಪಾಠಶಾಲೆಗಳು, ಮಹಾಪಾಠಶಾಲೆಗಳ ಶೈಕ್ಷಣಿಕ ಚಟುವಟಿಕೆಗಳನ್ನು ಮತ್ತು ಸದರಿ ಪಾಠಶಾಲೆಗಳಡಿ ಕಾರ್ಯನಿರ್ವಹಿಸುವ ಬೋಧಕ-ಬೋಧಕೇತರ ಸಿಬ್ಬಂದಿಗಳ ಆಡಳಿತಾತ್ಮಕ ಕಾರ್ಯನಿರ್ವಹಣೆಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಭಾಷಾ ಶಿಕ್ಷಣ ನಿರ್ದೇಶನಾಲಯವನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 218 ಯುಆರ್‌ಸಿ 2010, ದಿನಾಂಕ: 15.06.2011ರನ್ವಯ ಸ್ಥಾಪಿಸಲಾಗಿದೆ.<br><br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಭಾಷೆ, ಸಾಹಿತ್ಯ, ವ್ಯಾಕರಣ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸ, ವೇದಾಂತ ಮುಂತಾದ ವೇದ ಮತ್ತು ಶಾಸ್ತ್ರಾಧ್ಯಯನದಲ್ಲಿ ಮತ್ತು ಜೈನ ಧರ್ಮ ಶಾಸ್ತ್ರ ಮತ್ತಿತರ ಪೂರಕ ಶಿಕ್ಷಣದಲ್ಲಿಯೂ ಸಹ ಬೋಧನೆ ಮತ್ತು ಸಂಶೋಧನೆಯ ಶಿಕ್ಷಣ ನೀಡುವುದರಲ್ಲಿಯೂ ಪ್ರೋತ್ಸಾಹಿಸುತ್ತಾ ಬಂದಿರುತ್ತದೆ. |
| (ಆ) | 10ನೇ ತರಗತಿಯವರೆಗೆ ಸಂಸ್ಕೃತ ಕಲಿತ ವಿದ್ಯಾರ್ಥಿಗಳಿಗೆ ಸರ್ಕಾರಿ ಸೇವೆ ಮತ್ತು ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀಡುವ ಕುರಿತು ಸರ್ಕಾರದ ನಿಲುವೇನು: ಈ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಇಡಿ 259 ಯುಎನ್‌ಇ 2024

**(ಡಾ: ಎಂ. ಸಿ ಸುಧಾಕರ್)**
ಉನ್ನತ ಶಿಕ್ಷಣ ಸಚಿವರು